# ವ್ಯತಿಪಾತಯೋಗ

## 1. ವ್ಯತಿಪಾತ ಎಂದರೆ ಏನು ?

ವ್ಯತಿಪಾತ ಎನ್ನುವುದು 17ನೇ ಅಧಿಪತಿ . ಸೂರ್ಯ ಚಂದ್ರರ ಅನುಗ್ರಹದಿಂದ ಅದಕ್ಕೆ ಈ ಫಲವಿದೆ . ಯಾರು ವ್ಯತಿಪಾತ ದಿನದಂದು ಸ್ನಾನ ದಾನಾದಿಗಳನ್ನು ಮಾಡುವರೋ ಅವರ ದಾನಾದಿಗಳು ಕೋಟಿ ಪಟ್ಟು ವೃದ್ಧಿಸುವುದು ಎಂದು ಸೂರ್ಯ ಚಂದ್ರರು ಈ ಯೋಗಕ್ಕೆ ವರವಿತ್ತಿದ್ದಾರೆ .

ವ್ಯತಿಪಾತದಲ್ಲಿ ಮಾಡಿದ ದಾನಗಳ ಪುಣ್ಯವು ಸಂಕ್ರಾಂತಿ , ಅಮಾವಾಸ್ಯೆಗಳಲ್ಲಿ ಮಾಡಿದ ಪುಣ್ಯಕ್ಕಿಂತ ಸಾವಿರಪಟ್ಟು ಹೆಚ್ಚು ಫಲಕಾರಿ .

“ ಅಸಂಖ್ಯೇಯಂ ವ್ಯತಿಪಾತೇ ದಾನಂ ವೇದವಿದೋ ವಿದುಃ ”

" असंख्येयं व्यतिपाते दानं वेदविदो विदुः "

" asaMkhyEyaM vyatipaatE daanaM vEdavidO viduH "

## 2. ವ್ಯತಿಪಾತ ?

ವ್ಯತಿಪಾತಯೆಂಬುದು ಒಂದು ಯೋಗ ವಿಶೇಷವಾಗಿದೆ. ಚಂದ್ರ ಹಾಗೂ ಸೂರ್ಯರು ಪರಸ್ಪರವಾಗಿ ಒಬ್ಬರ ಮೇಲೊಬ್ಬರ ದೃಷ್ಟಿ ಬಿದ್ದ ಪರಿಣಾಮವಾಗಿ ಕೋಪದ ಸಂತಾಪದಿಂದ ಒಬ್ಬ ಭಯಂಕರವಾದ ಪ್ರಳಯಕಾಲದ ಅಗ್ನಿಗೆ ಸದೃಶನಾದ ವ್ಯಕ್ತಿಯು ಜನಿಸಿದನು . ಸೂರ್ಯನ ದೃಷ್ಟಿಪಾತ, ಹಾಗೂ ಚಂದ್ರನ ದೃಷ್ಟಿಪಾತ ಹೀಗೆ ವಿಭಿನ್ನವಾದ ದೃಷ್ಟಿಪಾತದಿಂದ ಜನಿಸಿದ ಇವನು “ ವ್ಯತಿಪಾತ ” ಎಂದೆನಿಸಿದನು .

ಚಂದ್ರಾರ್ಕಯೋಃ ನಯನವೀಕ್ಷಣ ಜಾತಮೂರ್ತಿಃ
ಕಾಲಾನಲದ್ಯುತಿನಿಭಃ ಪುರುಷೋತಿರೌದ್ರಃ

चंद्रार्कयोः नयनवीक्षण जातमूर्तिः
कालानलद्युतिनिभः पुरुषोतिरौद्रः

chaMdraarkayOH nayanaveekShaNa jaatamoortiH
kaalaanaladyutinibhaH puruShOtiraudraH

## 3. ವ್ಯತಿಪಾತದ ಅರ್ಘ್ಯ ಮಂತ್ರ –

ಧನುರ್ವ್ಯತೀಪಾತದಲ್ಲಿ ಅರುಣೋದಯಕಾಲದಲ್ಲಿ ನಾರಾಯಣನನ್ನು ಹುಗ್ಗಿಯಿಂದ ಪೂಜಿಸಿ ವ್ಯತಿಪಾತನಿಗೆ ಅರ್ಘ್ಯವನ್ನು ಕೊಡಬೇಕು.

ವ್ಯತೀಪಾತ ಮಹಾಸತ್ವ ಸರ್ವಪಾಪಪ್ರಣಾಶನ ।
ಸಹಸ್ರಬಾಹೋ ವಿಶ್ವಾತ್ಮನ್ ಗೃಹಾಣಾರ್ಘ್ಯಂ ನಮೋಸ್ತು ತೇ ।
ವ್ಯತೀಪಾತ ನಮಸ್ತೇಸ್ತು ನಮಸ್ತೇ ವಿಶ್ವಮಂಗಲ ।
ವಿಷ್ಣುಚಕ್ರಸ್ವರೂಪಾಯ ನಮಸ್ತೇ ದಿವ್ಯತೇಜಸೇ ॥

व्यतीपात महासत्व सर्वपापप्रणाशन ।
सहस्रबाहो विश्वात्मन् गृहाणार्घ्यं नमोस्तु ते ।
व्यतीपात नमस्तेस्तु नमस्ते विश्वमंगल ।
विष्णुचक्रस्वरूपाय नमस्ते दिव्यतेजसे ॥

vyateepaata mahaasatwa sarvapaapapraNaashana |
sahasrabaahO vishwaatman gRuhaaNaarghyaM namOstu tE |
vyateepaata namastEstu namastE vishwamaMgala |
viShNuchakraswaroopaaya namastE divyatEjasE ||

## 4. ವ್ಯತಿಪಾತದಲ್ಲಿ ಪಿತೃ ತರ್ಪಣ ಮಂತ್ರ –

ತರ್ಪಣಾಧಿಕಾರಿಗಳು ದಕ್ಷಿಣ ದಿಕ್ಕಿಗೆ ತಿರುಗಿ ಪಿತೃಗಳ ತೃಪ್ತಿಗಾಗಿ ಸರ್ವಪಿತೃಗಳನ್ನು ಸ್ಮರಿಸಿ ಈ ಮಂತ್ರದಿಂದ ತರ್ಪಣವನ್ನು ಕೊಡಬೇಕು .

ವಿಷ್ಣುಪ್ರಿಯ ವ್ಯತಿಪಾತ ಪಿತೃಣಾಮನೃಣಪ್ರದ ।
ಪಿತೃಣಾಂ ಮಮ ವೈಕುಂಠಂ ಪ್ರಯಚ್ಛ ಭಗವನ್ಮಮ ॥
ತ್ವತ್ಪ್ರಸಾದೇನ ಮೇ ಭಕ್ತಿರಸ್ತ್ವೇವಮನಪಾಯಿನಿ ।
ಜ್ಞಾನ ವಿಜ್ಞಾನ ವೈರಾಗ್ಯಂ ಪ್ರಯಚ್ಛ ಭಗವನ್ ಮಮ ॥

विष्णुप्रिय व्यतिपात पितृणामनृणप्रद ।
पितृणां मम वैकुंठं प्रयच्छ भगवन्मम ॥
त्वत्प्रसादेन मे भक्तिरस्त्वेवमनपायिनि ।
ज्ञान विज्ञान वैराग्यं प्रयच्छ भगवन् मम ॥

viShNupriya vyatipaata pitRuNaamanRuNaprada |
pitRuNaaM mama vaikuMThaM prayachCha bhagavanmama ||
twatprasaadEna mE bhaktirastvEvamanapaayini |
gnaana vignaana vairaagyaM prayachCha bhagavan mama ||

ಈ ವ್ಯತಿಪಾತ ಪೂಜೆಯು, ಅರ್ಧೋದಯ ಮುಂತಾದ ಪುಣ್ಯಕಾಲಗಳಲ್ಲಿ ಆಚರಿಸುವ ಪೂಜೆಗಿಂತಲೂ ಅನಂತಪಟ್ಟು ಅಧಿಕಪುಣ್ಯವನ್ನುಂಟು ಮಾಡುವುದು .

**Collection by Paneendra Gautham(9916904341)**

**For** www.sumadhwaseva.com